# DPUE

# KANNADA

## NOTES

# ಮುಟ್ಟಿಸಿಕೊಂಡವನು

ಕವಿ ಪರಿಚಯ:

ಹೆಸರು:  ಪಿ. ಲಂಕೇಶ್

ಸ್ಥಳ :  ಶಿವಮೊಗ್ಗ ಸಮೀಪದ ಕೊನಗವಳ್ಳಿ ಗ್ರಾಮ

ಕಾಲ : 1935 -2000

ಕೃತಿಗಳು :  ಕೆರೆಯ ನೀರನು ಕೆರೆಗೆ ಚೆಲ್ಲಿ, ನಾನಲ್ಲ, ಉಲ್ಲಂಘನೆ, ಮಂಜು ಕವಿದ ಸಂಜೆ, ಅಕ್ಕ, ತೆರೆಗಳು, ಸಂಕ್ರಾಂತಿ _ ಇತ್ಯಾದಿ

ಪ್ರಶಸ್ತಿಗಳು :  ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ಪಲ್ಲವಿ'  ಚಿತ್ರ ನಿರ್ದೇಶನಕ್ಕೆ ರಾಷ್ಟ್ರ ಪ್ರಶಸ್ತಿ.

ಅ.  ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು.

1.  ಆಪರೇಷನ್ ಆಗಬೇಕು. ಪರವಾಗಿಲ್ಲವಾ ?

ಈ ವಾಕ್ಯವನ್ನು ಪಿ. ಲಂಕೇಶ್ ರವರು ಬರೆದಿರುವ 'ಮುಟ್ಟಿಸಿಕೊಂಡವನು' ಎಂಬ ಗದ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ .

ಈ ವಾಕ್ಯವನ್ನು ಸರಕಾರಿ ಆಸ್ಪತ್ರೆಯ ಡಾ| ತಿಮ್ಮಪ್ಪನವರು ಬಸಲಿಂಗನಲ್ಲಿ ಹೇಳುತ್ತಾರೆ .

ಬಸಲಿಂಗನು ಎಡಗಣ್ಣಿನ ನೋವಿನಿಂದ ಬಳಲುತ್ತಾ ಕೊನೆಗೆ ಸರಕಾರಿ ಆಸ್ಪತ್ರೆಯಲ್ಲಿರುವ ಡಾ| ತಿಮ್ಮಪ್ಪನವರ ಹತ್ತಿರಕ್ಕೆ ಬರುವನು. ಅಲ್ಲಿ ಈಗಾಗಲೇ ಹತ್ತಾರು ಜನ ಸಾಲುಗಟ್ಟಿ ನಿಂತಿದ್ದರು .  ಅಲ್ಲಿಗೆ ಬರುವವರೆಲ್ಲರೂ ಬಡವರೇ ಆಗಿದ್ದರು .  ಬಸಲಿಂಗನು ತನ್ನ ಸರದಿಗಾಗಿ ಕಾಯುತ್ತಾ ಕುಳಿತುಕೊಳ್ಳುವನು .  ಅವನ ಸರದಿ ಬಂದಾಗ ತಿಮ್ಮಪ್ಪನವರ ಎದುರು ನಿಂತು ಒಟ್ಟಿಗೇ  ತನ್ನ ಕಷ್ಟಗಳನ್ನು ತೋಡಿಕೊಂಡ .  ತನ್ನ ಮಲಗುವ ಎತ್ತುಗಳಿಂದ ಹಿಡಿದು ತನ್ನ ನೋವು, ತನ್ನ ನಿದ್ರೆ ನೆಮ್ಮದಿಯನ್ನೆಲ್ಲ ಕೆಡಿಸಿರುವುದನ್ನು ಹೇಳಿದ .  ಸೂಟಿಯಾದ ಬೆರಳುಗಳ, ವಿಶ್ವಾಸ ತುಂಬಿದ ಮಾತುಗಳಿಂದ ಡಾ| ತಿಮ್ಮಪ್ಪನವರು ಅವನನ್ನು ಪರೀಕ್ಷಿಸಿದರು .  ಬಸಲಿಂಗನ ದೃಷ್ಟಿಯ ಆಳತೆ, ಸ್ಪಷ್ಟತೆಯನ್ನು ನೋಡಿದರು.  ನೋವಿನ ಕಾರಣಕ್ಕಾಗಿ ಹುಡುಕಿದರು.  ಕೊನೆಗೆ ನಿನ್ನ ಕಣ್ಣು ಸರಿ ಹೋಗುತ್ತೆ. ಆದರೆ ಆಪರೇಷನ್ ಆಗಬೇಕು. ಪರವಾಗಿಲ್ಲವಾ?  ಎಂದು ಕಣ್ಣನ್ನು ಪರೀಕ್ಷಿಸಿ ಬಸಲಿಂಗನಲ್ಲಿ ಧೈರ್ಯವನ್ನು ತುಂಬುವರು .

ಇಲ್ಲಿ ಡಾ| ತಿಮ್ಮಪ್ಪನವರ ವೃತ್ತಿ ನಿಷ್ಠೆ, ತಾಳ್ಮೆ, ವ್ಯಕ್ತಿಯು ಮಾನಸಿಕವಾಗಿ ಅಧೈರ್ಯಕ್ಕೆ ಒಳಗಾದಾಗ ಆತನಲ್ಲಿ ಆತ್ಮವಿಶ್ವಾಸವನ್ನು ತುಂಬುವ ಮಹತ್ವದ ಅಂಶವನ್ನು ಕಾಣಬಹುದು.

2.  ನೀರು ಬಿದ್ದರೆ ಕಣ್ಣು ಹೋಗುವ ಅಪಾಯ ಇದೆ .

ಈ ವಾಕ್ಯವನ್ನು ಪಿ. ಲಂಕೇಶ್ ರವರು ಬರೆದಿರುವ 'ಮುಟ್ಟಿಸಿಕೊಂಡವನು' ಎಂಬ ಗದ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಸರಕಾರಿ ಆಸ್ಪತ್ರೆಯ ಡಾ। ತಿಮ್ಮಪ್ಪನವರು ಬಸಲಿಂಗನಲ್ಲಿ ಹೇಳುತ್ತಾರೆ .

ಬಸಲಿಂಗನು ಎಡಗಣ್ಣು ನೋವಿನಿಂದ ಬಳಲುತ್ತಾ, ಕೊನೆಗೆ ಸರಕಾರಿ ಆಸ್ಪತ್ರೆಯಲ್ಲಿರುವ ಡಾ। ತಿಮ್ಮಪ್ಪನವರ ಹತ್ತಿರಕ್ಕೆ ಬರುವನು. ಸೂಟಿಯಾದ ಬೆರಳುಗಳ, ವಿಶ್ವಾಸ ತುಂಬಿದ ಮಾತುಗಳ, ಡಾ। ತಿಮ್ಮಪ್ಪ ಅವನನ್ನು ಪರೀಕ್ಷಿಸಿದರು. ಬಸಲಿಂಗನ ದೃಷ್ಟಿಯ ಆಳತೆ, ಸ್ಪಷ್ಟತೆಯನ್ನು ನೋಡಿದರು. ನೋವಿನ ಕಾರಣ ಹುಡುಕಿದರು.  ಕೊನೆಗೆ ನಿನ್ನ ಕಣ್ಣು ಸರಿ ಹೋಗುತ್ತೆ . ಆದರೆ ಆಪರೇಷನ್ ಆಗಬೇಕು, ಪರವಾಗಿಲ್ಲವಾ ?  ಎಂದರು.  ನಂತರ ಮನೆಗೆ ಬಂದ ಬಸಲಿಂಗನು ಸಿದ್ಲಿಂಗಿ ಕೇಳಿದಾಗ ಡಾಕ್ಟರ ಹೆಸರನ್ನು ಮಾತ್ರ

ಹೇಳಿದ.  ಅವನು ಮರುದಿನ ಮನೆಯ ಕೆಲಸವನ್ನೆಲ್ಲಾ  ಮುಗಿಸಿ ಆಸ್ಪತ್ರೆಗೆ ಬಂದ . ಅನುಭವಿ ವೈದ್ಯರಾದ ತಿಮ್ಮಪ್ಪ ಕೆಲವೇ ನಿಮಿಷಗಳಲ್ಲಿ ಬಸಲಿಂಗನ ಆಪರೇಷನ್ ಮಾಡಿ, ಇದು ಸೂಕ್ಷ್ಮವಾದ ಶಸ್ತ್ರಚಿಕಿತ್ಸೆ.  ನೀನು ಎರಡು ವಾರ ತಲೆಗೆ

ನೀರನ್ನು ಸೋಂಕಿಸಬಾರದು. ನೀರು ಬಿದ್ದರೆ ಕಣ್ಣು ಕೆಟ್ಟು ಹೋಗುವ ಅಪಾಯ ಇದೆ. ಎಂದು ಜಾಗರೂಕತೆಯ ಮಾತುಗಳನ್ನು ಹೇಳಿದರು.

ಇಲ್ಲಿ ಡಾ। ತಿಮ್ಮಪ್ಪನವರ ವೃತ್ತಿನಿಷ್ಠೆ, ತಾನು ಮಾಡಿದ ಕಣ್ಣಿನ ಆಪರೇಷನ್ ನ ಸಂಕೀರ್ಣತೆ, ಮತ್ತು ರೋಗಿ ತಪ್ಪು ಮಾಡಿದರೆ ಎದುರಾಗುವ ಅಪಾಯದ ಬಗ್ಗೆ ಎಚ್ಚರಿಕೆಯ ಮಾತುಗಳಿವೆ .

3. ಬಸಲಿಂಗಪ್ಪ, ನೀನು ತುಂಬಾ ಒಳ್ಳೆಯವನು.

ಈ ವಾಕ್ಯವನ್ನು ಪಿ. ಲಂಕೇಶ್ ರವರು ಬರೆದ 'ಮುಟ್ಟಿಸಿಕೊಂಡವನು' ಎಂಬ ಗದ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಡಾ। ತಿಮ್ಮಪ್ಪನವರು ಬಸಲಿಂಗನಲ್ಲಿ ಹೇಳುತ್ತಾರೆ.

ಬಸಲಿಂಗನು ಎಡಗಣ್ಣು ನೋವಿನಿಂದ ಬಳಲುತ್ತಾ, ಸರಕಾರಿ ಆಸ್ಪತ್ರೆಯಲ್ಲಿರುವ ಡಾ।ತಿಮ್ಮಪ್ಪನವ

ರಲ್ಲಿ ಆಪರೇಷನ್ ಮಾಡಿಸಿಕೊಂಡ ನಂತರ, ಡಾ। ತಿಮ್ಮಪ್ಪ ಹೊಲೆಯ ರೆಂದು ತಿಳಿದು ಬಸಲಿಂಗನ ಹೆಂಡತಿ ಸಿದ್ಲಿಂಗಿ ರಾದ್ಧಾಂತ ಮಾಡಿದಾಗ ಬಸಲಿಂಗನಿಗೆ ಈ ವಿಷಯ ತಿಳಿದು ಬೆರಗಾದ. ಸೂತಕವನ್ನು ಪರಿಹರಿಸಲು ಮೈ ತೊಳೆದುಕೊಳ್ಳ ಬೇಕೆಂದಾಗ, ಸಿದ್ಲಿಂಗಿ ಅವನಿಗೆ ಕಣ್ಣು ಮಾತ್ರ ನೆನೆಯದಂತೆ ಬಿಸಿ ನೀರನ್ನು ಹೊಯ್ದು ಸ್ನಾನ ಮಾಡಿಸಿದಳು. ಪಟ್ಟುಗಳಲ್ಲಿ ಭದ್ರವಾಗಿದ್ದ ಎಡಗಣ್ಣು ಎರಡು ದಿನ ನೋವಿನಿಂದ ಮುಕ್ತವಾಗಿದ್ದು, ಮೂರನೆಯ ದಿನಕ್ಕೆ ಮತ್ತೆ ನೋವು ಶುರುವಾಗುತ್ತದೆ. ಬಸಲಿಂಗ ಇಕ್ಕಟ್ಟಿಗೆ, ಪಶ್ಚಾತ್ತಾಪಕ್ಕೆ

ಸಿಲುಕಿದ. ಸುಳ್ಳು ಹೇಳಲಾರದ ಬಸಲಿಂಗ ಒಂದು ವಾರದೊಳಗೆ ತಿಮ್ಮಪ್ಪನವರನ್ನು ಬಿಟ್ಟು ಬೇರೆಲ್ಲಾ ಡಾಕ್ಟರುಗಳಿಗೆ ತನ್ನ ಕಣ್ಣು ತೋರಿಸಿ ಆದದ್ದನ್ನು ಹೇಳಿದ. ಆದರೆ ಅವರು ನೀಡಿದ ಸಲಹೆ, ಔಷಧಿ ಸರಿ ಹೋಗಲೇ ಇಲ್ಲ. ಕೊನೆಗೆ ತಿಮ್ಮಪ್ಪನವರ ಬಳಿಗೇ ಬಂದ. ಅವರು ಅವನನ್ನು ಪ್ರೀತಿಯಿಂದಲೇ ಕೇಳಿದಾಗ, ತಾನು ತಲೆಗೆ ನೀರನ್ನು ಸೋಂಕಿಸಿಯೇ ಇಲ್ಲ ಎಂದು ಸುಳ್ಳು ಹೇಳಿದ. ತನ್ನ ಸುಳ್ಳು ಡಾಕ್ಟರಿಗೆ ಗೊತ್ತಾಗಿರುವುದನ್ನು ಕಂಡ ಬಸಲಿಂಗ ಇನ್ನೂ ತಬ್ಬಿಬ್ಬಾದ . ಆಗ "ಬಸಲಿಂಗಪ್ಪ ನೀನು ತುಂಬಾ ಒಳ್ಳೆಯವನು. ಆದದ್ದು ಆದ ಹಾಗೆ ಹೇಳು" ಎಂದು ತಿಮ್ಮಪ್ಪ ಸಮಾಧಾನಾ ಪಡಿಸುವರು.

ಇಲ್ಲಿ ಜಾತಿ ಪ್ರಜ್ಞೆಯಿಂದಾಗಿ ವೈದ್ಯರ ಸಲಹೆಯನ್ನು ನಿರ್ಲಕ್ಷಿಸಿದಾಗ ಉಂಟಾದ ಅನಾಹುತ ಹಾಗೂ ಅವಮಾನಗಳ ಜೊತೆಗೆ ಮಾನವೀಯತೆ ಮೆರೆದ ವೈದ್ಯರ ಪ್ರಾಮಾಣಿಕತೆ, ವೃತ್ತಿನಿಷ್ಠೆ, ತಾಳ್ಮೆ, ಸಮಾಜದ ನೀತಿರಹಿತ ಧೋರಣೆಯ ಮಹತ್ವದ ಅಂಶವನ್ನು ಕಾಣಬಹುದು .

4. ಅವರು ನನ್ನಷ್ಟೇ ಒಳ್ಳೆಯ ಡಾಕ್ಟರ್. ಏನೂ ತಪ್ಪು ತಿಳಿಯಬೇಡ

ಮತ್ತು

5. ಈ ಮುಟ್ಟುವಿಕೆ ನಾನು ಊಹಿಸದೆ ಇದ್ದುದನ್ನು ಮಾಡಿದೆ .

ಈ ವಾಕ್ಯವನ್ನು ಪಿ ಲಂಕೇಶ್ ರವರು ಬರೆದ 'ಮುಟ್ಟಿಸಿಕೊಂಡವನು' ಎಂಬ ಗದ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಡಾ। ತಿಮ್ಮಪ್ಪ ಬಸಲಿಂಗನಲ್ಲಿ ಹೇಳುವರು. ಬಸಲಿಂಗ ಎಡಗಣ್ಣು ನೋವಿನಿಂದ ಬಳಲುತ್ತಾ ಸರಕಾರಿ ಆಸ್ಪತ್ರೆಯ ಡಾ। ತಿಮ್ಮಪ್ಪ ನವರಲ್ಲಿ ಆಪರೇಷನ್ ಮಾಡಿಸಿಕೊಂಡಾಗ ಡಾ। ತಿಮ್ಮಪ್ಪ ಹೊಲೆಯರೆಂದು ತಿಳಿದಾಗ, ಸೂತಕವನ್ನು ಪರಿಹರಿಸಲು ಮೈ ತೊಳೆದುಕೊಳ್ಳುವನು. ಆಗ ಮತ್ತೆ ನೋವು ಶುರುವಾದಾಗ, ಬಸಲಿಂಗ ಒಂದು ವಾರದೊಳಗೆ ತಿಮ್ಮಪ್ಪನವರನ್ನು ಬಿಟ್ಟು ಬೇರೆಲ್ಲಾ ಡಾಕ್ಟರುಗಳಿಗೆ ತನ್ನ ಕಣ್ಣು ತೋರಿಸುತ್ತಾನೆ. ತಾನು ತಲೆಗೆ ನೀರನ್ನು ಸೋಕಿಸಿಲ್ಲವೆಂದು ಸುಳ್ಳು ಹೇಳಿದ. ರಾಜಕಾರಣಿ ರುದ್ರಪ್ಪ ನೊಂದಿಗೆ ಎಲ್ಲಾ ಡಾಕ್ಟರುಗಳನ್ನು ಕಂಡು ಕೊನೆಗೆ ತಿಮ್ಮಪ್ಪರಲ್ಲಿಯೇ ಬರುತ್ತಾನೆ. ರೋಗಿಯ ವರ್ಚಸ್ಸಿನಲ್ಲಿ ಆದ ಬದಲಾವಣೆಯನ್ನು ಗಮನಿಸಿ, "ಬಸಲಿಂಗಪ್ಪ , ನಾನು ನಿನ್ನನ್ನು ಮುಟ್ಟಿದ್ದು ಡಾಕ್ಟರಾಗಿ ; ಆದರೆ ನಿನ್ನಂಥ ಮುಗ್ಧ ಮನುಷ್ಯನಲ್ಲಿ ಕೂಡ ಈ ಮುಟ್ಟುವಿಕೆ ನಾನು ಊಹಿಸದೆ ಇದ್ದುದನ್ನು ಮಾಡಿದೆ. ಅದು ನಿನ್ನ ತಪ್ಪಲ್ಲ. ಇದಕ್ಕಾಗಿ ನಾನು ಯಾರನ್ನೂ ಬೈಯ್ಯುವುದಿಲ್ಲ. ನೀನು ಡಾಕ್ಟರ್ ಚಂದ್ರಪ್ಪರನ್ನು ನೋಡಿ ನನ್ನ ಹೆಸರನ್ನು ಹೇಳು . ಅವರು ನನ್ನಷ್ಟೇ ಒಳ್ಳೆಯ ಡಾಕ್ಟರ್. ಏನೂ ತಪ್ಪು ತಿಳಿಯಬೇಡ" ಎನ್ನುವವರು.

ಇಲ್ಲಿ ಜಾತಿ ಪ್ರಜ್ಞೆಯಿಂದಾಗಿ ವೈದ್ಯರ ಸಲಹೆಯನ್ನು ನಿರ್ಲಕ್ಷಿಸಿದಾಗ ಉಂಟಾದ ಅನಾಹುತ ಹಾಗೂ ಅವಮಾನಗಳ ಜೊತೆಗೆ ಮಾನವೀಯತೆ ಮೆರೆದ ವೈದ್ಯರ ಪ್ರಾಮಾಣಿಕತೆ, ವೃತ್ತಿನಿಷ್ಠೆ, ತಾಳ್ಮೆ, ಬಸಲಿಂಗನ ಕಷ್ಟವನ್ನು ತಿಳಿದು ತೋರುವ ಸಹಕಾರ ಮನೋಭಾವನೆಯನ್ನು ಕಾಣಬಹುದು .

6. ನೀನು ಅವರನ್ನು ನೋಡಿದರೆ ಮಾತ್ರ ಇರುವ ಒಂದು ಕಣ್ಣು ಉಳಿಯುತ್ತೆ .

ಈ ವಾಕ್ಯವನ್ನು ಪಿ ಲಂಕೇಶ್ ಅವರು ಬರೆದಿರುವ 'ಮುಟ್ಟಿಸಿಕೊಂಡವನು' ಎಂಬ ಗದ್ಯ ಭಾಗದಿಂದ ಆರಿಸಲಾಗಿದೆ.

ಈ ಮಾತನ್ನು ಡಾ। ಚಂದ್ರಪ್ಪನವರು ಬಸಲಿಂಗನಲ್ಲಿ ಹೇಳುತ್ತಾರೆ.

ಬಸಲಿಂಗ ಎಡಗಣ್ಣು ನೋವಿನಿಂದ ಬಳಲುತ್ತಾ ಡಾ। ತಿಮ್ಮಪ್ಪನವರನ್ನು ನಿರ್ಲಕ್ಷಿಸಿ, ರಾಜಕಾರಣಿ ರುದ್ರಪ್ಪನೊಂದಿಗೆ ಎಲ್ಲಾ ಡಾಕ್ಟರುಗಳನ್ನು ಕಂಡು ಕೊನೆಗೆ ಡಾ|ತಿಮ್ಮಪ್ಪನವರಲ್ಲಿಗೇ ಬರುವನು. ಅವರು ರೋಗಿಯಲ್ಲಿ ಆದ ಬದಲಾವಣೆಯನ್ನು ಗಮನಿಸಿ "ಬಸಲಿಂಗಪ್ಪ, ನಾನು ನಿನ್ನನ್ನು ಮುಟ್ಟಿದ್ದು ಡಾಕ್ಟರಾಗಿ. ಆದರೆ ನಿನ್ನಂಥ ಮುಗ್ಧ ಮನುಷ್ಯನಲ್ಲಿ ಈ ಮುಟ್ಟುವಿಕೆ ನಾನು ಊಹಿಸದೆ ಇದ್ದುದನ್ನು ಮಾಡಿದೆ. ಇದು ನಿನ್ನ ತಪ್ಪಲ್ಲ. ಇದಕ್ಕಾಗಿ ನಾನು ಯಾರನ್ನೂ ಬೈಯ್ಯುವುದಿಲ್ಲ. ನೀನು ಡಾಕ್ಟರ್ ಚಂದ್ರಪ್ಪರನ್ನು ನೋಡಿ ನನ್ನ ಹೆಸರನ್ನು ಹೇಳು. ಅವರು ನನ್ನಷ್ಟೇ ಒಳ್ಳೆಯ ಡಾಕ್ಟರ್. ಏನೂ ತಪ್ಪು ತಿಳಿಯಬೇಡ ಎಂದಾಗ, ಚಂದ್ರಪ್ಪನವರ ಜಾತಿಯನ್ನು ತಿಳಿದುಕೊಂಡು ಬಸಲಿಂಗ ಅಲ್ಲಿಗೆ ಹೋಗುವನು. ಆಗ ಚಂದ್ರಪ್ಪನವರು, ಡಾ। ತಿಮ್ಮಪ್ಪರಿಂದ ಆಗದ ಕೆಲಸ ನನ್ನಂಥವರಿಂದ ಸಾಧ್ಯವಿಲ್ಲ. ಅವರು ನಮ್ಮ ವೈದ್ಯಲೋಕ ಬಲ್ಲ ಅತ್ಯಂತ ಪ್ರಾಮಾಣಿಕ ಪ್ರತಿಭಾವಂತ ಡಾಕ್ಟರ್. ಈ ಕಣ್ಣಿನ ರೋಗ ಅವರ ವಲಯಕ್ಕೆ ಸೇರಿದ್ದು. ನೀನು ಅವರನ್ನು ನೋಡಿದರೆ ಮಾತ್ರ ಇರುವ ಒಂದು ಕಣ್ಣು ಉಳಿಯುತ್ತೆ" ಎಂದು ಸಲಹೆ ನೀಡುವರು.

ಇಲ್ಲಿ ಜಾತಿ ಪ್ರಜ್ಞೆಯಿಂದಾಗಿ ವೈದ್ಯರ ಸಲಹೆಯನ್ನು ನಿರ್ಲಕ್ಷಿಸಿದಾಗ ಉಂಟಾದ ಅನಾಹುತ ಹಾಗೂ ಅವಮಾನಗಳ ಜೊತೆಗೆ ಮಾನವೀಯತೆ ಮರೆದ ವೈದ್ಯರ ಪ್ರಾಮಾಣಿಕ ಸಲಹೆ - ಸಹಕಾರ ಮನೋಭಾವನೆಯ ಮಹತ್ವದ ಅಂಶವನ್ನು ಕಾಣಬಹುದು .

ಅ. ಒಂದು ವಾಕ್ಯದಲ್ಲಿ ಉತ್ತರಿಸಿ.

1. ಬಸಲಿಂಗನ ಹೆಂಡತಿಯ ಹೆಸರೇನು ?

ಬಸಲಿಂಗನ ಹೆಂಡತಿಯ ಹೆಸರು ಸಿದ್ಲಿಂಗಿ.

2. ಬಸಲಿಂಗನಿಗೆ ಕಾಣಿಸಿಕೊಂಡ ತೊಂದರೆ ಯಾವುದು?

ಬಸಲಿಂಗನಿಗೆ ಕಣ್ಣು ನೋವಿನ ತೊಂದರೆ ಕಾಣಿಸಿಕೊಂಡಿತು.

3. ಬಸಲಿಂಗನಿಗೆ ಮೊದಲು ಯಾವ ಕಣ್ಣಿನಲ್ಲಿ ನೋವು ಆರಂಭವಾಯಿತು?

ಬಸಲಿಂಗನಿಗೆ ಮೊದಲು ಎಡಗಣ್ಣಿನಲ್ಲಿ ನೋವು ಆರಂಭವಾಯಿತು .

4. ' ಮುಟ್ಟಿಸಿಕೊಂಡವನು' ಕಥೆಯಲ್ಲಿ ಸರಕಾರಿ ಆಸ್ಪತ್ರೆಯ ವೈದ್ಯರ ಹೆಸರೇನು ?

ಮುಟ್ಟಿಸಿಕೊಂಡವನು - ಕಥೆಯಲ್ಲಿ ಸರಕಾರಿ ಆಸ್ಪತ್ರೆಯ ವೈದ್ಯರ ಹೆಸರು ಡಾ। ತಿಮ್ಮಪ್ಪ.

5. ಸರಕಾರಿ ಆಸ್ಪತ್ರೆಯ ಬಗ್ಗೆ ಬಸಲಿಂಗನಲ್ಲಿದ್ದ ಅಭಿಪ್ರಾಯವೇನು?

ಸರಕಾರಿ ಆಸ್ಪತ್ರೆಯ ಬಗ್ಗೆ ಬಸಲಿಂಗನಿಗೆ ದಿಕ್ಕು ದಿವಾಳಿ ಇಲ್ಲದವರು ಹೋಗುವ ಜಾಗವೆಂಬ ಅಭಿಪ್ರಾಯವಿತ್ತು.

6. ಬಸಲಿಂಗನು ಡಾ| ತಿಮ್ಮಪ್ಪನಿಗೆ ಏನೆಂದು ಸುಳ್ಳು ಹೇಳಿದನು ?

ಬಸಲಿಂಗನು ಡಾ। ತಿಮ್ಮಪ್ಪನಿಗೆ ತಲೆಗೆ ನೀರು ಸೋಂಕಿಸಿಯೇ ಇಲ್ಲವೆಂದು ಸುಳ್ಳು ಹೇಳಿದನು.

7. ಬಸಲಿಂಗ ವೈದ್ಯರಿಗಾಗಿ ಅಲೆದಾಗ ಜೊತೆಗಿದ್ದ ರಾಜಕಾರಣಿ ಯಾರು?

ಬಸಲಿಂಗ ವೈದ್ಯರಿಗಾಗಿ ಅಲೆದಾಗ ಜೊತೆಗಿದ್ದ ರಾಜಕಾರಣಿ ಲಿಂಗಾಯತ ಜಾತಿಯ ರುದ್ರಪ್ಪ.

8. ಬಸಲಿಂಗನ ಕಾಯಿಲೆ ದೇಹದ ಮಟ್ಟದಿಂದ ಯಾವ ಸ್ತರವನ್ನು ತಲುಪತೊಡಗಿತು?

ಬಸಲಿಂಗನ ಕಾಯಿಲೆ ದೇಹದ ಮಟ್ಟದಿಂದ ಮಾನಸಿಕ ಸ್ತರವನ್ನು ತಲುಪತೊಡಗಿತು .

9. ಡಾ। ತಿಮ್ಮಪ್ಪ ಬಸಲಿಂಗನಿಗೆ ಯಾವ ವೈದ್ಯರನ್ನು ಕಾಣಬೇಕೆಂದು ಸೂಚಿಸಿದರು?

DPUE

ಡಾ। ತಿಮ್ಮಪ್ಪ ಬಸಲಿಂಗನಿಗೆ ಡಾ। ಚಂದ್ರಪ್ಪನವರನ್ನು ಕಾಣಬೇಕೆಂದು ಸೂಚಿಸಿದರು.

10. ಕೊನೆಗೆ ಬಸಲಿಂಗ ಯಾವುದರಿಂದ ಮುಕ್ತನಾಗಿದ್ದ? ಕೊನೆಗೆ ಬಸಲಿಂಗ ಸುಳ್ಳುಗಳಿಂದ ಮುಕ್ತನಾಗಿದ್ದ.

ಆ. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ .

1. ಬಸಲಿಂಗನಿಗೆ ಅದು ಪುರುಸೊತ್ತಿಲ್ಲದ ಕಾಲ. ಯಾಕೆ ?

ಬಸಲಿಂಗನಿಗೆ ಅದು ಪುರುಸೊತ್ತಿಲ್ಲದ ಕಾಲವಾಗಿತ್ತು. ಯಾಕೆಂದರೆ ಗೇಯುವುದನ್ನು ನಾಲ್ಕು ದಿನ ತಡ ಮಾಡಿದರೆ ಕುಳ ನೆಲದಲ್ಲಿ ನಾಟುವುದಿಲ್ಲ. ಆದರೆ ಇರುವ ಎರಡು ಎತ್ತುಗಳಲ್ಲಿ ಒಂದು ನೊಗ ಇಟ್ಟೊಡನೆ ಮಲಗಿ ಬಿಡುತ್ತದೆ. ಎಷ್ಟು ಹೊಡೆದರೂ ಏಳುವುದಿಲ್ಲ. ಇನ್ನೊಂದು ಕೂಡ ತನ್ನ ಸಹೋದ್ಯೋಗಿಯಂತೆಯೇ ಆಗಿಬಿಡುವ ಸೂಚನೆಯಿದೆ. ಮಲಗಿದ್ದು ಒಂದು ಏಟು ಕೊಟ್ಟೊಡನೆ ಏಳುತ್ತದೆ . ಇಂತಹ ಸ್ಥಿತಿಯಲ್ಲಿ ಮಗುವಿಗೆ ಕೆಮ್ಮು ಶುರುವಾಗಿ ಹುಷಾರಿಲ್ಲವಾಗುತ್ತದೆ. ಹಾಗಾಗಿ ಬಸಲಿಂಗನಿಗೆ ಅದು ಬಿಡುವಿಲ್ಲದ ಕಾಲವಾಗಿತ್ತು.

2. ಹೆಂಡತಿ ಸಿದ್ಲಿಂಗಿ ಏನು ಹೇಳುತ್ತಲೇ ಇದ್ದಳು?

ಬಸಲಿಂಗನಿಗೆ ಅದು ಪುರುಸೊತ್ತಿಲ್ಲದ ಕಾಲವಾಗಿತ್ತು. ಯಾಕೆಂದರೆ ಗೇಯುವುದನ್ನು ತಡ ಮಾಡಿದರೆ ಕುಳ ನೆಲದಲ್ಲಿ ನಾಟುವುದಿಲ್ಲ. ಆದರೆ ಇರುವ ಎರಡು ಎತ್ತುಗಳಲ್ಲಿ ಒಂದು ನೊಗ ಇಟ್ಟೊಡನೆ ಮಲಗಿ ಬಿಡುತ್ತದೆ ಎಷ್ಟು ಹೊಡೆದರೂ ಏಳುವುದಿಲ್ಲ. ಇನ್ನೊಂದು ಕೂಡ ತನ್ನ ಸಹೋದ್ಯೋಗಿಯಂತೆಯೇ ಆಗಿಬಿಡುವ ಸೂಚನೆಗಳಿವೆ. ಇಂತಹ ವಿಷಮ ಸ್ಥಿತಿಯಲ್ಲಿ ಮಗುವಿಗೆ ಮೈಯಲ್ಲಿ ಸರಿಯಿಲ್ಲ. ಮಗುವಿನ ಕೆಮ್ಮು ಹೋಗುತ್ತಲೇ ಇಲ್ಲ. ಶಿವನೂರು ಸ್ವಾಮಿಗಳಿಗೆ ತೋರಿಸಬೇಕು ಎಂದು ಹೆಂಡ್ತಿ ಸಿದ್ಲಿಂಗಿ ಹೇಳುತ್ತಲೇ ಇದ್ದಳು.

3. ಬಸಲಿಂಗನಿಗೆ ತನ್ನ ಕಷ್ಟದ ಮುಂದೆ ಯಾವುದು ಗೌಣವಾಗಿ ಕಾಣತೊಡಗಿತು ?

ಬಸಲಿಂಗನಿಗೆ ಕಣ್ಣಿನ ಬೇನೆ ಉಂಟಾದಾಗ ವೈದ್ಯರು ಹೇಳಿದಂತೆ ಬಟ್ಟೆಯ ಕಾವು, ಉಪ್ಪಿನ ಕಾವು ಕೊಟ್ಟುಕೊಂಡ. ಆದರೆ ಕಣ್ಣಿನ ನೋವು ಮತ್ತು ಮಂದಸ್ಥಿತಿ ಕಡಿಮೆಯಾಗಲಿಲ್ಲ. ಹಾಗೆಂದು ಹೆಂಡತಿಗೆ ಹೇಳಿದರೆ ನಂಬುತ್ತಿರಲಿಲ್ಲ. ಅದು ಆತನ ಕಲ್ಪನೆ ಎಂಬಂತೆ ಮಾತನಾಡಿದಳು. ಬಸಲಿಂಗನಿಗೆ ಸಿಟ್ಟು ಬಂತಲ್ಲದೆ ಒಂದು ರೀತಿಯ ಅಸಹಾಯಕತೆ ಶುರುವಾಯಿತು. ಕೆಲವರಲ್ಲಿ ತನ್ನ ಕಷ್ಟ ತೋಡಿಕೊಂಡ. ಉಳದಿರುವ ಹೊಲ, ಮಗುವಿನ ಕಾಯಿಲೆ ಎಲ್ಲವೂ ಅವನಿಗೆ ಗೌಣವಾಗಿ ಕಾಣತೊಡಗಿದವು.

4. ಕಣ್ಣನ್ನು ಪರೀಕ್ಷಿಸಿದ ಡಾ| ತಿಮ್ಮಪ್ಪ ಬಸಲಿಂಗನಿಗೆ ಏನೆಂದು ಹೇಳಿದರು? ಬಸಲಿಂಗ ಎಡಗಣ್ಣು ನೋವಿನಿಂದ ಬಳಲುತ್ತಾ ಕೊನೆಗೆ ಸರಕಾರಿ ಆಸ್ಪತ್ರೆಯ ಡಾ| ತಿಮ್ಮಪ್ಪನವರ ಹತ್ತಿರಕ್ಕೆ ಹೋಗಿ ಅವರಲ್ಲಿ ತನ್ನ ಎಲ್ಲಾ ಕಷ್ಟಗಳನ್ನು ತೋಡಿಕೊಂಡ. ತನ್ನ ಮಲಗುವ ಎತ್ತುಗಳಿಂದ ಹಿಡಿದು ತನ್ನ ನೋವು, ತನ್ನ ನಿದ್ರೆ ನೆಮ್ಮದಿಯನ್ನೆಲ್ಲ ಕೆಡಿಸಿರುವುದನ್ನು ಹೇಳಿದ . ಸೂಟಿಯಾದ ಬೆರಳುಗಳ, ವಿಶ್ವಾಸ ತುಂಬಿದ ಮಾತುಗಳ, ಡಾಕ್ಟರ್ ತಿಮ್ಮಪ್ಪ ಅವನನ್ನು ಪರೀಕ್ಷಿಸಿದರು. ಬಸಲಿಂಗನ ದೃಷ್ಟಿಯ ಆಳತೆ, ಸ್ಪಷ್ಟತೆಯನ್ನು ನೋಡಿ, ನೋವಿನ ಕಾರಣಕ್ಕಾಗಿ ಹುಡುಕಿ, ಕೊನೆಗೆ ನಿನ್ನ ಕಣ್ಣು ಸರಿ ಹೋಗುತ್ತೆ. ಆದರೆ ಆಪರೇಷನ್ ಆಗಬೇಕು. ಪರವಾಗಿಲ್ಲವಾ. ಎಂದು ಬಸಲಿಂಗನಲ್ಲಿ ಧೈರ್ಯವನ್ನು ತುಂಬಿದರು .

5.ಸಿದ್ಲಿಂಗಿ ಯಾಕೆ ರಾದ್ಧಾಂತ ಮಾಡಿದಳು?

ಡಾ। ತಿಮ್ಮಪ್ಪನವರ ಹತ್ತಿರಕ್ಕೆ ಬಂದಾಗ ಸೂಟಿಯಾದ ಬೆರಳುಗಳ, ವಿಶ್ವಾಸ ತುಂಬಿದ ಮಾತುಗಳಿಂದ ಬಸಲಿಂಗನ ದೃಷ್ಟಿಯ ಆಳತೆ, ಸ್ಪಷ್ಟತೆಯನ್ನು ನೋಡಿ, ನೋವಿನ ಕಾರಣಕ್ಕಾಗಿ ಹುಡುಕಾಡಿ, ಆಪರೇಷನ್ ಮಾಡಿ," ಇದು ಸೂಕ್ಷ್ಮವಾದ ಶಸ್ತ್ರಚಿಕಿತ್ಸೆ. ನೀನು ಎರಡು ವಾರ ತಲೆಗೆ ನೀರನ್ನು ಸೋಂಕಿಸಬಾರದು. ನೀರು ಬಿದ್ದರೆ ಕಣ್ಣು ಕೆಟ್ಟು ಹೋಗುವ ಅಪಾಯ ಇದೆ ಎಂದಿದ್ದರು. ಆದರೆ ಅವನು ಮನೆಗೆ ಹೋದ ಮೇಲೆ ಡಾ। ತಿಮ್ಮಪ್ಪ ಹೊಲೆಯರೆಂಬುದು ಹೇಗೋ ತಿಳಿದುಕೊಂಡಿದ್ದ ಸಿದ್ಲಿಂಗಿ ದೊಡ್ಡ ರಾದ್ಧಾಂತವನ್ನೇ ಮಾಡಿದಳು.

6. ಅನ್ಯ ಡಾಕ್ಟರುಗಳು ಬಸಲಿಂಗನ ಕಾಯಿಲೆಯ ಬಗ್ಗೆ ಏನೆಂದು ಪ್ರತಿಕ್ರಿಯಿಸಿದರು ?

ಬಸಲಿಂಗ ಎಡಗಣ್ಣು ನೋವಿನಿಂದ ಬಳಲುತ್ತಾ ವೈದ್ಯರಲ್ಲಿಗೆ ಹೋದಾಗ, ಅವರು ನೋವಿನ ವಿವರಗಳನ್ನೆಲ್ಲ ಕೇಳಿ, ಅವರಿಗೆ ಅರ್ಥವಾಗದಿದ್ದರೂ,ತಮ್ಮ ವೈದ್ಯಕೀಯ ಪವಾಡಗಳನ್ನು ವಿವರಿಸಿ, ಬಟ್ಟೆಯ ಕಾವು ಉಪ್ಪಿನ ಕಾವು ಕೊಟ್ಟುಕೊಳ್ಳಲು ಹೇಳಿ ಹಚ್ಚಿಕೊಳ್ಳಲು ಲೇಹ್ಯ ಕೊಟ್ಟರು. ಇನ್ನೊಂದು ಸಂದರ್ಭದಲ್ಲಿ ಕೆಲವು ಡಾಕ್ಟರುಗಳು "ಇದಕ್ಕೆ

DRAFT

ಆಪರೇಷನ್ ಬೇಕಿಲ್ಲ. ಆ ಡಾ। ತಿಮ್ಮಪ್ಪನಿಗೆ ಬುದ್ಧಿ ಇಲ್ಲ. ಅದಕ್ಕೆ ಆಪರೇಷನ್ ಮಾಡಿದ್ದಾರೆ" ಎಂದು ಹೇಳಿ ಔಷಧಿ ನೀಡಿ ಹಿತವಚನ ಹೇಳಿದರು .

7. ಡಾ। ಚಂದ್ರಪ್ಪ ಬಸಲಿಂಗನಿಗೆ ಡಾ। ತಿಮ್ಮಪ್ಪನ ಬಗ್ಗೆ ಕೊಟ್ಟ ಅಭಿಪ್ರಾಯವೇನು?

ಬಸಲಿಂಗನ ಎಡಗಣ್ಣಿನ ಪೂರ್ತಿ ಚರಿತ್ರೆಯನ್ನು ಬಸಲಿಂಗನ ತಿರುಚುವಿಕೆಯೊಂದಿಗೆ ಕೇಳಿದ ಚಂದ್ರಪ್ಪ ಹೇಳಿದರು "ಡಾ। ತಿಮ್ಮಪ್ಪರಿಂದ ಆಗದ ಕೆಲಸ ನನ್ನಂಥವರಿಂದ ಸಾಧ್ಯವಿಲ್ಲ. ಅವರು ನಮ್ಮ ವೈದ್ಯಲೋಕ ಬಲ್ಲ ಅತ್ಯಂತ ಪ್ರಾಮಾಣಿಕ, ಪ್ರತಿಭಾವಂತ ಡಾಕ್ಟರ್. ಈ ಕಣ್ಣಿನ ರೋಗ ಅವರ ವಲಯಕ್ಕೆ ಸೇರಿದ್ದು. ನೀನು ಅವರನ್ನು ನೋಡಿದರೆ ಮಾತ್ರ ಇರುವ ಒಂದು ಕಣ್ಣು ಉಳಿಯುತ್ತೆ" ಎಂದು ಸಲಹೆ ನೀಡುವರು.

8. ಕೊನೆಯಲ್ಲಿ ಬಸಲಿಂಗನಿಗೆ ಏನೆಂದು ನಿಶ್ಚಿತವಾಗತೊಡಗಿತು?

ಡಾ। ತಿಮ್ಮಪ್ಪನವರ ಸಲಹೆಯಂತೆ ಡಾ। ಚಂದ್ರಪ್ಪರನ್ನು ಭೇಟಿಯಾದ ಬಸಲಿಂಗನಿಗೆ , "ಡಾ। ತಿಮ್ಮಪ್ಪರಿಂದ ಆಗದ ಕೆಲಸ ನನ್ನಂಥವರಿಂದ ಸಾಧ್ಯವಿಲ್ಲ. ನಮ್ಮ ವೈದ್ಯಲೋಕ ಬಲ್ಲ ಅತ್ಯಂತ ಪ್ರಾಮಾಣಿಕ ಪ್ರತಿಭಾವಂತ ಡಾಕ್ಟರ್ ಅವರು. ಈ ಕಣ್ಣಿನ ರೋಗ ಅವರ ವಲಯಕ್ಕೆ ಸೇರಿದ್ದು. ನೀನು ಅವರನ್ನು ನೋಡಿದರೆ ಮಾತ್ರ ಇರುವ ಒಂದು ಕಣ್ಣು ಉಳಿಯುತ್ತೆ" ಎಂದಾಗ ಬಸಲಿಂಗ ಬಿಸಿಲಿನಲ್ಲಿ ತಲೆಯ ಮೇಲೆ ಕೈ ಹೊತ್ತು ಕೂತು ಯಾರ ಮಾತನ್ನೂ ಕೇಳದೆ ಸುಮ್ಮನಾದನು. ಬಲಗಣ್ಣಿನ ನೋವು ಭೀಕರವಾಗಿತ್ತು. ಬರಬರುತ್ತಾ ದೃಷ್ಟಿ ಮುಂದವಾಗುತ್ತಿರುವುದು ಬಸಲಿಂಗನಿಗೆ ಗೊತ್ತಿತ್ತು. ತನ್ನ ಉಡಾಫೆ, ಸುಳ್ಳು, ಜಾತಿ, ಮಠದ ಗುರು - ಯಾರೂ ತನ್ನ ಕಣ್ಣು ಉಳಿಸುವುದಿಲ್ಲ. ಎಂದು ನಿಶ್ಚಿತ ವಾಗತೊಡಗಿತು.

ಈ. ಐದಾರು ವಾಕ್ಯಗಳಲ್ಲಿ ಉತ್ತರಿಸಿ

1. ಬಸಲಿಂಗನು ಎದುರಿಸುತ್ತಿದ್ದ ಸಮಸ್ಯೆಗಳು ಯಾವುವು?

ಬಸಲಿಂಗನಿಗೆ ಪುರುಸೊತ್ತಿಲ್ಲದ ಕಾಲವಾಗಿತ್ತು. ಏಕೆಂದರೆ ಗೇಯುವುದನ್ನು ನಾಲ್ಕು ದಿನ ತಡ ಮಾಡಿದರೆ ಕುಳ ನೆಲದಲ್ಲಿ ನಾಟುವುದಿಲ್ಲ. ಆದರೆ ಇರುವ ಎರಡು ಎತ್ತುಗಳಲ್ಲಿ ಒಂದು ನೊಗ ಇಟ್ಟೊಡನೆ ಮಲಗಿಬಿಡುತ್ತದೆ. ಎಷ್ಟು ಹೊಡೆದರೂ ಏಳುವುದಿಲ್ಲ. ಇನ್ನೊಂದು ಕೂಡ ತನ್ನ ಸಹೋದ್ಯೋಗಿಯಂತೆಯೇ ಆಗಿಬಿಡುವ ಸೂಚನೆಗಳಿವೆ. ಮಲಗಿದ್ದು ಒಂದು ಏಟು ಕೊಟ್ಟೊಡನೆ ಏಳುತ್ತಿತ್ತು . ಜೊತೆಗಾರ ಏಳುವುದನ್ನೇ ಕಾದು, ಕೆಲಸವಿಲ್ಲದ ಬಗ್ಗೆ ಖುಷಿಗೊಳ್ಳುವಂತೆ ಕಂಡು ಬರುತ್ತಿರುವುದರಿಂದ ಬಸಲಿಂಗ ಎರಡೂ ಎತ್ತುಗಳನ್ನು ಯಾರಾದರೊಬ್ಬರಿಗೆ ಸಾಟಿಯಲ್ಲಿ ಕೊಟ್ಟು ಹೊಸ ಎತ್ತುಗಳನ್ನು ಹೊಂಚಿಕೊಳ್ಳಬೇಕು. ಇಂತಹ ಸ್ಥಿತಿಯಲ್ಲಿ ಮಗುವಿಗೆ ಮೈಯಲ್ಲಿ ಸರಿಯಲ್ಲ. ಶಿವನೂರು ಸ್ವಾಮಿಗಳಿಗೆ ತೋರಿಸಬೇಕು ಎಂದು ಹೆಂಡತಿ ಸಿದ್ಲಂಗಿ ಹೇಳುತ್ತಲೇ ಇದ್ದಳು. ಮಗುವಿನ ಕೆಮ್ಮು ಹೆಚ್ಚಾಗುತ್ತಲೇ ಇತ್ತು.

ಈ ನಡುವೆ ಬಸವಲಿಂಗನಿಗೆ ಇನ್ನೊಂದು ತೊಂದರೆ ಕಾಣಿಸಿಕೊಂಡಿತು. ಈ ತೊಂದರೆ ತನ್ನನ್ನು ಇಷ್ಟೊಂದು ಘಾಸಿಗೊಳಿಸೀತು ಎಂದು ಬಸಲಿಂಗ ಊಹಿಸಿರಲಿಲ್ಲ . ತನ್ನ ಮಲಗುವ ಎತ್ತುಗಳನ್ನು ಸಾಟಿ ಮಾಡಲು ಹೇಳಬೇಕಾದ ಸುಳ್ಳು ಅವನ ತಲೆ ತಿನ್ನತೊಡಗಿತ್ತು. ಸುಳ್ಳು ಹೇಳಲು ಬೇಕಾದ ಛಾತಿ, ಮಾತುಗಾರಿಕೆ ಅವನಲ್ಲಿ ಇರಲಿಲ್ಲ ಎತ್ತುಗಳ ಬಗ್ಗೆ ಹೇಳಲು ಒಳ್ಳೆಯದನ್ನು ಲೆಕ್ಕ ಹಾಕಿದಂತೆಲ್ಲ ತಲೆ ಬಿಸಿ ಯಾಗುತ್ತಿತ್ತು. ಅದೇನೇ ಆದರೂ ಈ ಸಮಯದಲ್ಲಿ ಬಸಲಿಂಗನ ಎಡಗಣ್ಣಿನಲ್ಲಿ ಕಾಣಿಸಿಕೊಂಡ ನೋವು ಹೆಚ್ಚಾಗುತ್ತಲೇ ಹೋಗುವಂತಹ ಸಮಸ್ಯೆಗಳನ್ನು ಬಸಲಿಂಗ ಎದುರಿಸುತ್ತಿದ್ದನು.

2. ಕಣ್ಣು ನೋವು ಆರಂಭವಾದ ಆರಂಭದಲ್ಲಿ ಬಸಲಿಂಗ ಪಡೆದುಕೊಂಡ ಚಿಕಿತ್ಸೆ ಯಾವ ರೀತಿಯದು?

ಬಸಲಿಂಗನಿಗೆ ಎಡಗಣ್ಣಿನಲ್ಲಿ ಕಾಣಿಸಿಕೊಂಡ ನೋವು ಇಷ್ಟೊಂದು ಘಾಸಿಗೊಳಿಸಿತೆಂದು ಊಹಿಸಿರಲಿಲ್ಲ. ತನ್ನ ಮಲಗುವ ಎತ್ತುಗಳನ್ನು ಸಾಟಿ ಮಾಡಲು ಹೇಳಬೇಕಾದ ಸುಳ್ಳು ಅವನ ತಲೆ ತಿನ್ನತೊಡಗಿತ್ತು. ಸುಳ್ಳು ಹೇಳಲು ಬೇಕಾದ ಛಾತಿ, ಮಾತುಗಾರಿಕೆ ಅವನಲ್ಲಿರಲಿಲ್ಲ. ಎತ್ತುಗಳ ಬಗ್ಗೆ ಹೇಳಲು ಒಳ್ಳೆಯದನ್ನು ಲೆಕ್ಕ ಹಾಕಿದಂತೆಲ್ಲ ತಲೆ ಬಿಸಿಯಾಗುತ್ತಿತ್ತು. ಅದೇನೇ ಆದರೂ ಈ ಸಮಯದಲ್ಲಿ ಬಸಲಿಂಗನ ಎಡಗಣ್ಣಿನಲ್ಲಿ ಕಾಣಿಸಿಕೊಂಡ ನೋವು ಹೆಚ್ಚಾಗುತ್ತಲೇ ಹೋಗುವಂತಹ ಸಮಸ್ಯೆಗಳನ್ನು ಬಸಲಿಂಗ ಎದುರಿಸುತ್ತಿದ್ದನು.

ಮೊದಮೊದಲು ಕಣ್ಣುಬೇನೆ ಇರಬಹುದೆಂದು ತಿಳಿದನಾದರೂ ಕಣ್ಣು ಕೆಂಪಾಗದೆ ಕಣ್ಣಿನ ಸುತ್ತ ನೋವು ಮಾತ್ರ ಹೆಚ್ಚಾಯಿತು. ಈ ನೋವು ಬಲಗಣ್ಣಿನಲ್ಲಿ ಇರಲಿಲ್ಲ. ಎಡಗಣ್ಣು ನೋವಿನೊಂದಿಗೆ ಸ್ವಲ್ಪ ಮಂದವಾಗತೊಡಗಿತು ನಗರದ ತನ್ನ ಎಂದಿನ ವೈದ್ಯರಿಗೆ ತೋರಿಸಿದ. ಅವರಿಗೆ ಅರ್ಥವಾಗದಿದ್ದರೂ ಬಸಲಿಂಗನಿಗೆ ಧೈರ್ಯ ತುಂಬಲು ಒಳ್ಳೊಳ್ಳೆಯ ಮಾತನಾಡಿದರು. ತಮ್ಮ ವೈದ್ಯಕೀಯ ಪವಾಡಗಳನ್ನು ವಿವರಿಸಿದರು. ಹಚ್ಚಿಕೊಳ್ಳಲು ಲೇಹ್ಯ ಕೊಟ್ಟರು. ಸ್ವಲ್ಪ ಸಮಾಧಾನದಿಂದ ಮನೆಗೆ ಬಂದ ಬಸಲಿಂಗ ಹಲವು ದಿನ ಲೇಹ್ಯ ಹಚ್ಚಿಕೊಂಡು ವೈದ್ಯರು ಹೇಳಿದಂತೆ ಬಟ್ಟೆಯ

ಕಾವು, ಉಪ್ಪಿನ ಕಾವು ಕೊಟ್ಟುಕೊಂಡ. ಆದರೆ ಕಣ್ಣಿನ ನೋವು ಮತ್ತು ಮಂದಸ್ಥಿತಿ ಕಡಿಮೆಯಾಗಲಿಲ್ಲ. ಹಾಗೆಂದು ಹೆಂಡತಿ ಸಿದ್ಲಿಂಗಿಗೆ ಹೇಳಿದರೆ ನಂಬುತ್ತಿರಲಿಲ್ಲ. ಅದು ಆತನ ಕಲ್ಪನೆ ಎಂಬಂತೆ ಮಾತನಾಡಿದಳು. ಬಸಲಿಂಗನಿಗೆ ಸಿಟ್ಟು ಬಂತಲ್ಲದೆ ಒಂದು ರೀತಿಯ ಅಸಹಾಯಕತೆ ಶುರುವಾಯಿತು. ನೋವನ್ನು ಸುಮ್ಮನೆ ವಿವರಿಸದೆ, ಕೆಲವರಲ್ಲಿ ತನ್ನ ಕಷ್ಟ ತೋಡಿಕೊಂಡ. ಉಳದಿರುವ ನೆಲ, ಮಗುವಿನ ಕಾಯಿಲೆ, ಎಲ್ಲವೂ

ಬಸಲಿಂಗನಿಗೆ ಗೌಣವಾಗಿ ಕಾಣತೊಡಗಿದವು. ಹೀಗೆ ಬಸಲಿಂಗನು ಕಣ್ಣು ನೋವು ಶುರುವಾದ ಆರಂಭದಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡನು .

3. ಬಸಲಿಂಗ ಡಾ। ತಿಮ್ಮಪ್ಪನವರ ಸೂಚನೆಗಳನ್ನು ಪಾಲಿಸದೇ ಇರಲು ಕಾರಣವೇನು?

ಬಸಲಿಂಗನಿಗೆ ಕಣ್ಣು ನೋವು ಉಂಟಾದಾಗ ವೈದ್ಯರು ಹೇಳಿದಂತೆ ಬಟ್ಟೆಯ ಕಾವು, ಉಪ್ಪಿನ ಕಾವು ಕೊಟ್ಟುಕೊಂಡ. ಆದರೆ ಕಣ್ಣಿನ ನೋವು ಮತ್ತು ಮಂದಸ್ಥಿತಿ ಕಡಿಮೆಯಾಗಲಿಲ್ಲ. ಹಾಗೆಂದು ಹೆಂಡತಿ ಸಿದ್ಲಿಂಗಿಗೆ ಹೇಳಿದರೆ ನಂಬುತ್ತಿರಲಿಲ್ಲ. ಅದು ಆತನ ಕಲ್ಪನೆ ಎಂಬಂತೆ ಮಾತನಾಡಿದಳು. ಬಸಲಿಂಗನಿಗೆ ಸಿಟ್ಟು ಬಂತಲ್ಲದೆ ಒಂದು ರೀತಿಯ ಅಸಹಾಯಕತೆ ಶುರುವಾಯಿತು. ಬಸಲಿಂಗನು ಎಡಗಣ್ಣು ನೋವಿನಿಂದ ಬಳಲುತ್ತಾ ಕೊನೆಗೆ ಸರಕಾರಿ ಆಸ್ಪತ್ರೆಯಲ್ಲಿರುವ ಡಾ। ತಿಮ್ಮಪ್ಪನವರ ಹತ್ತಿರಕ್ಕೆ ಬಂದು ಒಟ್ಟಿಗೆ ತನ್ನ ಕಷ್ಟಗಳನ್ನು ತೋಡಿಕೊಂಡ. ತನ್ನ ಮಲಗುವ ಎತ್ತುಗಳಿಂದ ಹಿಡಿದು ತನ್ನ ನೋವು, ತನ್ನ ನಿದ್ರೆ ನೆಮ್ಮದಿಯನ್ನು ಕೆಡಿಸಿರುವುದನ್ನು ಹೇಳಿದ ಸೂಟಿಯಾದ ಬೆರಳುಗಳ, ವಿಶ್ವಾಸ ತುಂಬಿದ ಮಾತುಗಳ ಡಾ। ತಿಮ್ಮಪ್ಪ ಅವನನ್ನು ಪರೀಕ್ಷಿಸಿದರು. ಬಸಲಿಂಗನ ದೃಷ್ಟಿಯ ಅಳತೆ, ಸ್ಪಷ್ಟತೆಯನ್ನು ನೋಡಿ ನೋವಿನ ಕಾರಣಕ್ಕಾಗಿ ಹುಡುಕಿ ಕೊನೆಗೆ ನಿನ್ನ ಕಣ್ಣು ಸರಿ ಹೋಗುತ್ತದೆ . ಆದರೆ ಆಪರೇಷನ್ ಮಾಡಬೇಕು. ಇದು ಸೂಕ್ಷ್ಮವಾದ ಶಸ್ತ್ರಚಿಕಿತ್ಸೆ. ನೀನು ಎರಡು ವಾರ ತಲೆಗೆ ನೀರನ್ನು ಸೋಂಕಿಸಬಾರದು. ನೀರು ಬಿದ್ದರೆ ಕಣ್ಣು ಕೆಟ್ಟು ಹೋಗುವ ಅಪಾಯ ಇದೆ. ಎಂದು ಜಾಗರೂಕತೆಯ ಮಾತುಗಳನ್ನು ಆತನಿಗೆ ಹೇಳಿದರು. ಬಸಲಿಂಗನಲ್ಲಿ ತಿಮ್ಮಪ್ಪನವರ ಬಗ್ಗೆ ವಿಚಿತ್ರ ಪ್ರೀತಿ ಬೆಳೆದಿತ್ತು. ಆದರೆ ಮನೆಗೆ ಬಂದಾಗ ಡಾ। ತಿಮ್ಮಪ್ಪ ಹೊಲೆಯರೆಂದು ತಿಳಿದಿರುವ ಹೆಂಡತಿ ಸಿದ್ಲಿಂಗಿ ರಾದ್ಧಾಂತ ಮಾಡಿದಾಗ ಬಸಲಿಂಗನಿಗೆ ಈ ವಿಷಯ ತಿಳಿದು ಬೆರಗಾದ. ಸೂತಕವನ್ನು ಪರಿಹರಿಸಲು ಮೈ ತೊಳೆದು ಕೊಳ್ಳಬೇಕೆಂದು ಸಿದ್ಲಿಂಗಿ ಅವನಿಗೆ ಕಣ್ಣು ಮಾತ್ರ ನೆನೆಯದಂತೆ ಬಿಸಿ ನೀರನ್ನು ಹೊಯ್ದು ಸ್ನಾನ ಮಾಡಿಸಿದಳು. ಆದರೆ ಮೂರನೆಯ ದಿನದಿಂದ ಕಣ್ಣುನೋವು ಮತ್ತೆ ಜಾಸ್ತಿಯಾಗುತ್ತದೆ.

4. ಬಸಲಿಂಗನಿಗೆ ಸಿಟ್ಟು ಬರಲು ಕಾರಣವೇನು? ಅದನ್ನು ಆತ ಯಾವ ರೀತಿಯಲ್ಲಿ ವ್ಯಕ್ತಪಡಿಸುತ್ತಾನೆ?

ಬಸಲಿಂಗನು ಎಡಗಣ್ಣು ನೋವಿನಿಂದ ಬಳಲುತ್ತಾ ಡಾ। ತಿಮ್ಮಪ್ಪನವರಲ್ಲಿ ಆಪರೇಷನ್ ಮಾಡಿಸಿಕೊಂಡ ನಂತರ ಡಾ| ತಿಮ್ಮಪ್ಪ ಹೊಲೆಯರೆಂದು ತಿಳಿದು ಹೆಂಡತಿ ಸಿದ್ಲಿಂಗಿ ರಾದ್ಧಾಂತ ಮಾಡಿ, ಸೂತಕವನ್ನು ಪರಿಹರಿಸಿಕೊಳ್ಳಲು ಮೈ ತೊಳೆದುಕೊಳ್ಳಬೇಕು ಎಂದು, ಕಣ್ಣು ಮಾತ್ರ ನೆನೆಯದಂತೆ ಸ್ನಾನ ಮಾಡಿಸಿದಳು. ಮೂರನೆಯ ದಿನಕ್ಕೆ ಮತ್ತೆ ನೋವು ಆರಂಭವಾಗುತ್ತದೆ. ಆಗ ಬಸಲಿಂಗ ಒಂದು ವಾರದೊಳಗೆ ಡಾ। ತಿಮ್ಮಪ್ಪನವರನ್ನು ಬಿಟ್ಟು ಬೇರೆಲ್ಲಾ ಡಾಕ್ಟರುಗಳಿಗೆ ತನ್ನ ಕಣ್ಣು ತೋರಿಸಿ ಆದದ್ದನ್ನು ಹೇಳಿದ. ಅವರು ನೀಡಿದ ಸಲಹೆ, ಔಷಧಿ ಸರಿ ಹೋಗಲೇ ಇಲ್ಲ. ಕೊನೆಗೆ ತಿಮ್ಮಪ್ಪನವರ ಬಳಿಗೇ ಬರುತ್ತಾನೆ. ಅವರು ಅವನನ್ನು ಪ್ರೀತಿಯಿಂದಲೇ ಕೇಳಿದಾಗ, ತಲೆಗೆ ನೀರನ್ನು ಸೋಂಕಿಸಿಯೇ ಇಲ್ಲವೆಂದು ಸುಳ್ಳು ಹೇಳಿದ. ತನ್ನ ಸುಳ್ಳು ಡಾಕ್ಟರಿಗೆ ಗೊತಾಗಿರುವುದನ್ನು ಕಂಡ ಬಸಲಿಂಗ ಇನ್ನೂ ತಬ್ಬಿಬ್ಬಾದ. 'ಬಸಲಿಂಗಪ್ಪ, ನೀನು ತುಂಬಾ ಒಳ್ಳೆಯವನು. ಆದದ್ದು ಆದ ಹಾಗೆ ಹೇಳು' ಎಂದಾಗ ಬಸಲಿಂಗ ಚೈತನ್ಯವನ್ನೇ ಕಳೆದುಕೊಂಡು ಆದದ್ದನ್ನೆಲ್ಲ ಹೇಳಿ, "ಹೆಂಗಾದ್ರೂ ಮಾಡಿ ಆಪರೇಷನ್ ಮಾಡಿಬಿಡ್ರಿ, ನಿಮ್ಮ ಮಾತು ಮೀರೊಲ್ಲ "ಎನ್ನುವನು. ತಿಮ್ಮಪ್ಪನವರು ಆಗ "ಇನ್ನೊಂದು ಆಪರೇಷನ್ ನಿಂದ ಏನೂ ಪ್ರಯೋಜನವಾಗುವುದಿಲ್ಲ ಎಂದು ಹೇಳಿದಾಗ ಬಸಲಿಂಗನಿಗೆ ಸಿಟ್ಟು ಬಂದಿತು.

ಡಾ। ತಿಮ್ಮಪ್ಪ ತನ್ನ ಜಾತಿಯನ್ನು ಕೆಡಿಸಿ, ತನ್ನ ಬಗ್ಗೆ ನಿರ್ಲಕ್ಷ್ಯ ಬೆಳಸಿಕೊಳ್ಳುತ್ತಿರುವಂತೆ ಅಂದುಕೊಂನು. ತನ್ನ ಕಣ್ಣು ಹೋಗಲು ತಿಮ್ಮಪ್ಪ ಕೂಡ ಒಂದು ರೀತಿಯಲ್ಲಿ ಕಾರಣವೆಂದು ತಿಳಿದ. ಆದದ್ದನ್ನೆಲ್ಲ ತಾನು ಬಲ್ಲವರಲ್ಲಿ ಹೇಳಿಕೊಂಡು ಡಾ। ತಿಮ್ಮಪ್ಪನವರನ್ನು ಟೀಕಿಸಿದನು. ತಿಮ್ಮಪ್ಪನವರ ಬಗ್ಗೆ ಸಿಟ್ಟು ಬರುವಂತೆ ಅವರಲ್ಲಿ ವಿಷಯಗಳನ್ನು ತಿರುಚಿ ಹೇಳಿದ. ತಾನು ತಿರುಚಿ ಹೇಳುತ್ತಿರುವುದೇ ಸತ್ಯ ವಿರುವುದಾಗಿ ನಂಬಿದ. ಒಮ್ಮೊಮ್ಮೆ ಇಡೀ ದಿನ ಏನೂ ಅರ್ಥವಾಗದವನಂತೆ ಕೂತು ಬಿಡುತ್ತಾನೆ. ತನ್ನಲ್ಲಿ ಬೆಳೆಯುತ್ತಿರುವ ಸಣ್ಣತನಕ್ಕೆ ದಂಗಾಗಿ ಬಿಡುತ್ತಾನೆ. ತನ್ನ ಸುಳ್ಳು ಎತ್ತಿನ ಸಾಟಿಗೆ ಅನುಕೂಲವಾಗಬಹುದು. ತನ್ನ ಕುಟುಂಬಕ್ಕೆ ಸಹಾಯಕವಾಗಬಹುದು ಎಂದು ಅನ್ನಿಸಿತು. ಹೆಂಡತಿ ಸಿದ್ಲಿಂಗಿಯೊಡನೆ ಮಾತಾಡುವಾಗ ಹೆಚ್ಚಿನ ಗೆಲುವು ಅವನ ದನಿಯಲ್ಲಿ ಕಾಣಿಸಿಕೊಂಡಿತು. ಉಡಾಫೆಯ ಮಾತುಗಳನ್ನು ಕಲಿಯಬೇಕೆನ್ನಿಸಿತು.

5. ಬಸಲಿಂಗ ಕೊನೆಯಲ್ಲಿ ತೆಗೆದುಕೊಂಡ ನಿರ್ಧಾರ ಯಾವುದು? ಅದಕ್ಕೆ ಕಾರಣಗಳೇನು?

ಬಸಲಿಂಗನು ಎಡಗಣ್ಣು ನೋವಿನಿಂದ ಬಳಲುತ್ತಾ ಡಾ। ತಿಮ್ಮಪ್ಪನವರಲ್ಲಿ ಆಪರೇಷನ್ ಮಾಡಿಸಿಕೊಂಡಾಗ ಡಾ। ತಿಮ್ಮಪ್ಪ ಹೊಲೆಯರೆಂದು ತಿಳಿದು ಹೆಂಡತಿ ಸಿದ್ಲಿಂಗಿ ರಾದ್ಧಾಂತ ಮಾಡಿ, ಸೂತಕವನ್ನು ಪರಿಹರಿಸಲು ಸ್ನಾನ ಮಾಡಿಸಿದಳು. ಮೂರನೆಯ ದಿನ ಮತ್ತೆ ನೋವು ಶುರುವಾಗುತ್ತದೆ.ಆಗ ಬಸಲಿಂಗ ಒಂದು ವಾರದೊಳಗೆ ತಿಮ್ಮಪ್ಪನವರನ್ನು ಬಿಟ್ಟು ಬೇರೆಲ್ಲಾ ಡಾಕ್ಟರುಗಳಿಗೆ ತನ್ನ ಕಣ್ಣು ತೋರಿಸಿ ಆದದ್ದನ್ನು ಹೇಳಿದ . ಡಾ । ತಿಮ್ಮಪ್ಪನವರನ್ನು ನಿರ್ಲಕ್ಷಿಸಿ, ರಾಜಕಾರಣಿ ರುದ್ರಪ್ಪನೊಂದಿಗೆ ಎಲ್ಲ ಡಾಕ್ಟರುಗಳನ್ನು ನೋಡಿ ಕೊನೆಗೆ ತಿಮ್ಮಪ್ಪನವರಲ್ಲಿಗೇ ಬರುವನು.

ರೋಗಿಯಲ್ಲಿ ಆದ ಬದಲಾವಣೆಯನ್ನು ಗಮನಿಸಿ "ಬಸಲಿಂಗಪ್ಪ ನಾನು ನಿನ್ನನ್ನು ಮುಟ್ಟಿದ್ದು ಡಾಕ್ಟರಾಗಿ; ಆದರೆ ನಿನ್ನಂಥ ಮುಗ್ಧ ಮನುಷ್ಯನಲ್ಲಿ ಕೂಡಾ ಈ ಮುಟ್ಟುವಿಕೆ ನಾನು ಊಹಿಸದೆ ಇದ್ದುದನ್ನು ಮಾಡಿದೆ. ಅದು ನಿನ್ನ ತಪ್ಪಲ್ಲ. ಇದಕ್ಕಾಗಿ ನಾನು ಯಾರನ್ನೂ ಬೈಯ್ಯುವುದಿಲ್ಲ. ನೀನು ಡಾಕ್ಟರ್ ಚಂದ್ರಪ್ಪರನ್ನು ನೋಡಿ ನನ್ನ ಹೆಸರನ್ನು ಹೇಳು. ಅವರು ನನ್ನಷ್ಟೇ ಒಳ್ಳೆಯ ಡಾಕ್ಟರು. ಏನು ತಪ್ಪು ತಿಳಿಯಬೇಡ" ಎಂದಾಗ ಚಂದ್ರಪ್ಪನ ಜಾತಿಯನ್ನು ಮೊದಲೇ ತಿಳಿದುಕೊಂಡು ಅವರಲ್ಲಿಗೆ ಹೋಗುವನು. ಆಗ ಚಂದ್ರಪ್ಪನವರು "ಡಾ। ತಿಮ್ಮಪ್ಪರಿಂದ ಆಗದ ಕೆಲಸ ನನ್ನಂಥವರಿಂದ ಸಾಧ್ಯವಿಲ್ಲ. ಅವರು ನಮ್ಮ ವೈದ್ಯಲೋಕ ಬಲ್ಲ ಅತ್ಯಂತ ಪ್ರಾಮಾಣಿಕ, ಪ್ರತಿಭಾವಂತ ಡಾಕ್ಟರು. ಈ ಕಣ್ಣಿನ ರೋಗ ಅವರ ವಲಯಕ್ಕೆ ಸೇರಿದ್ದು. ನೀನು ಅವರನ್ನು ನೋಡಿದರೆ ಮಾತ್ರ ಇರುವ ಒಂದು ಕಣ್ಣು ಉಳಿಯುತ್ತೆ." ಎಂದು ಸಲಹೆ ನೀಡುವವರು ಆಗ ಬಸಲಿಂಗ ಹೊರಬಂದು ಬಿಸಿಲಲ್ಲಿ ತಲೆಯ ಮೇಲೆ ಕೈ ಹೊತ್ತು ಕೂರುವವನು. ಯಾರು ಮಾತನಾಡಿಸಿದರೂ ಮಾತಾಮಾತಾಡದೆ, ಹೆಂಡತಿಯ ಮಾತನ್ನುಂ ಕೇಳದೆ ಸುಮ್ಮನಾದನು. ಬಸಲಿಂಗನ ನೋವು ಭೀಕರವಾಗಿತ್ತು ಬರಬರುತ್ತಾ ದೃಷ್ಟಿ ಮಂದವಾಗುತ್ತಿರುವುದು ಬಸಲಿಂಗನಿಗೆ ಗೊತ್ತಿತ್ತು. ತನ್ನ ಉಡಾಫೆ, ಸುಳ್ಳು, ಜಾತಿ, ಮಠದ ಗುರು - ಯಾರೂ ತನ್ನ ಕಣ್ಣು ಉಳಿಸುವುದಿಲ್ಲ ಎಂಬುದು ನಿರ್ಧಾರವಾಯಿತು. ನೇರವಾಗಿ ತಿಮ್ಮಪ್ಪನವರಲ್ಲಿಗೆ ಹೋದ. ಬಸಲಿಂಗನ ನೋವು ತುಂಬಿದ ಬಲಗಣ್ಣು ಕಂಬನಿ ಸುರಿಸುತ್ತಿತ್ತು. ತಿಮ್ಮಪ್ಪನವರ ಕೈ ಹಿಡಿದುಕೊಂಡು ಅವರನ್ನು ಅಪ್ಪಿಕೊಂಡು ಗಟ್ಟಿಯಾಗಿ ಅಳತೊಡಗಿದನು.

ಭಾಷಾ ಭ್ಯಾಸ :

ಗ್ರಾಮ್ಯ ಪದಗಳು : ಗೇಯು, ಸಾಟಿ ಮಾಡು, ತಲೆ ಬಿಸಿ, ಹೆಂಗಾದ್ರೂ, ಇನ್ನೊಂದ್ಸಲ, ಬೀಳಲೊಲ್ಲವು.

ಅನ್ಯ ದೇಶ್ಯಗಳು : ಡಾಕ್ಟರ್, ಆಪರೇಷನ್.

ತತ್ಸಮ - ತದ್ಭವ : ದೃಷ್ಟಿ - ದಿಟ್ಟಿ , ಕ್ಷಣ - ಚಣ

*************